# ನಾವೆದ್ದು ನಿಲ್ಲದಿದ್ದರೆ- ಕರ್ನಾಟಕ

Email: ifwedonotrisekarnataka@gmail.com
Mobile: 9972551999,9845197079,8861105649,9970110070

ಗೆ,
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನಸೌಧ
ಬೆಂಗಳೂರು.

ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್ ಅವರೆ,

**ವಿಷಯ: ರಾಜ್ಯ ಸಚಿವ ಸಂಪುಟದಿಂದ ಮಹಿಳೆಯರನ್ನು ಹೊರಗಿಟ್ಟಿರುವುದನ್ನು ಖಂಡಿಸುತ್ತೇವೆ ಹಾಗೂ ಈ ಗಂಭೀರ ಪ್ರಮಾದವನ್ನು ಕೂಡಲೆ ಸರಿಪಡಿಸುವಂತೆ ಆಗ್ರಹಿಸುತ್ತೇವೆ**

ಇತ್ತೀಚೆಗೆ ವಿಸ್ತರಿಸಲಾದ ಕರ್ನಾಟಕ ಸಚಿವ ಸಂಪುಟದಲ್ಲಿ ಒಬ್ಬರೂ ಮಹಿಳೆ ಇಲ್ಲದಿರುವುದನ್ನು ಕರ್ನಾಟಕದ ಮಹಿಳೆಯರು, ಮಹಿಳಾ ಸಂಘಟನೆಗಳು ಹಾಗೂ ಮಹಿಳೆಯರ ಹಕ್ಕುಗಳು, ಘನತೆ ಮತ್ತು ನ್ಯಾಯಕ್ಕಾಗಿ ಬದ್ಧರಾಗಿರುವ ಸ್ತ್ರೀವಾದಿಗಳ ಜಾಲವಾದ '**ನಾವೆದ್ದು ನಿಲ್ಲದಿದ್ದರೆ**' ವೇದಿಕೆಯು ತೀವ್ರವಾಗಿ ಖಂಡಿಸುತ್ತದೆ.

ನೀವು ಮುಖ್ಯಮಂತ್ರಿಯಾದಾಗ ರಚಿಸಿದ ಮೊದಲ ಸಚಿವ ಸಂಪುಟದಲ್ಲಿಯೇ ಒಬ್ಬರೂ ಮಹಿಳೆ ಇಲ್ಲದಿರುವುದನ್ನು ಗಮನಿಸಿದ್ದೆವು. ಆದರೆ ವಿಸ್ತರಣೆಯಲ್ಲಿ ಈ ಲೋಪ ಸರಿಯಾಗಬಹುದು ಎಂದು ನಿಧಾನಿಸಿದ್ದೆವು. ಆದರೆ ನಮ್ಮ ನಿರೀಕ್ಷೆಯನ್ನು ಸುಳ್ಳು ಮಾಡಿ, ರಾಜಕೀಯ ಪಾಲ್ಗೊಳ್ಳುವಿಕೆಯಿಂದ ಮಹಿಳೆಯರನ್ನು ಸಂಪೂರ್ಣವಾಗಿ ಹೊರಗೆ ಹಾಕಿದ್ದೀರಿ. ಬರೀ ಗಂಡಸರೇ ಇರುವ ಈ ಸಚಿವ ಸಂಪುಟವು ಆಕಸ್ಮಿಕವಲ್ಲ. ಇದು ಒಂದು ರಾಜಕೀಯ ಆಯ್ಕೆಯಾಗಿದೆ. ರಾಜ್ಯದಲ್ಲಿ ಅಧಿಕಾರದ ವಿಷಯ ಬಂದಾಗ ಮಹಿಳೆಯರನ್ನು ಹಾಗೂ ಮಹಿಳೆಯರ ನಾಯಕತ್ವವನ್ನು ತಳ್ಳಿಹಾಕಬಹುದು ಎಂಬ ನಿಲುವನ್ನು ಇದು ತೋರಿಸುತ್ತಿದೆ.

ಕರ್ನಾಟಕದ ಮತದಾರರಲ್ಲಿ ಸರಿಸುಮಾರು ಅರ್ಧದಷ್ಟು ಮಹಿಳೆಯರಿದ್ದಾರೆ. 2023ರ ವಿಧಾನಸಭೆ ಚುನಾವಣೆಯಲ್ಲಿ, ಮಹಿಳಾ ಮತದಾರರು ಹೆಚ್ಚಿರುವ 52 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅರ್ಧಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ಗೆದ್ದಿತು. ಇದು ನಿಮ್ಮ ಮತದಾರರ ಆಧಾರ ಬಹುಮಟ್ಟಿಗೆ ಮಹಿಳೆಯರು ಎಂಬುದನ್ನು ತೋರಿಸುತ್ತದೆ. ಆದರೂ, ಸಚಿವ ಸ್ಥಾನಕ್ಕೆ ಒಬ್ಬ ಮಹಿಳೆಯನ್ನೂ ನೀವು ಆಯ್ಕೆಮಾಡಿಕೊಂಡಿಲ್ಲ.

ಮಹಿಳಾ ಹಕ್ಕುಗಳ ವಿಷಯದಲ್ಲಿ ತಾನು ಚಾಂಪಿಯನ್ ಎಂದು ಬಿಂಬಿಸಿಕೊಳ್ಳುವ, ಸಂಸತ್ತಿನಲ್ಲಿ ಮಹಿಳಾ ಮೀಸಲು ಕಾಯ್ದೆಗೆ ಬೆಂಬಲ ನೀಡಿರುವ, ಹಾಗೂ ಒಂದು ಪಕ್ಷವಾಗಿ ಶೇ.33 ಮೀಸಲಾತಿಗೆ ಬದ್ಧತೆಯನ್ನು ಘೋಷಿಸಿರುವ ಪಕ್ಷಕ್ಕೆ ಇದು ಶೋಭೆ ತರುವುದಿಲ್ಲ.

ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಕಾಣದಂತೆ ಮರೆಯಾಗೇನೂ ಇಲ್ಲ. ಅವರು ಪಂಚಾಯತ್‌ಗಳು, ನಗರಸಭೆಗಳು, ಸಾಮಾಜಿಕ ಚಳವಳಿಗಳು, ಸ್ವಸಹಾಯ ಗುಂಪುಗಳು, ಕಾರ್ಮಿಕ ಸಂಘಟನೆಗಳು, ನಾಗರಿಕ ಸಂಸ್ಥೆಗಳು, ವಿಜ್ಞಾನ, ತಂತ್ರಜ್ಞಾನ, ಅಕಾಡೆಮಿಕ್ ವಲಯ, ವ್ಯಾಪಾರ, ಉದ್ದಿಮೆ, ಕೈಗಾರಿಕೆ, ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಮುನ್ನೆಲೆಯಲ್ಲೇ ಇದ್ದಾರೆ. ರಾಜ್ಯದ ಆರ್ಥಿಕತೆಗೆ, ಆಡಳಿತಕ್ಕೆ ಹಾಗೂ ಪ್ರಜಾಸತ್ತಾತ್ಮಕ ಸಮಾಜಕ್ಕೆ ಮಹಿಳೆಯರ ಕೊಡುಗೆ ಅಗಣಿತವಾಗಿದೆ. ಆದರೂ, ರಾಜ್ಯದ ಉನ್ನತ ಕಾರ್ಯನಿರ್ವಹಣಾ ಅಂಗವನ್ನು ರಚಿಸುವಾಗ, ಮಹಿಳೆಯರು ಕಾಣಿಸದಂತೆ ಮತ್ತು ಅವರ ಧ್ವನಿ ಕೇಳಿಸದಂತೆ ಮಾಡಲಾಗಿದೆ.

ಸಚಿವ ಸಂಪುಟವೆಂದರೆ ರಾಜ್ಯದ ಪ್ರಮುಖ ರಾಜಕೀಯ ಮತ್ತು ಕಾರ್ಯನೀತಿ ನಿರ್ಧಾರಗಳನ್ನು ಕೈಗೊಳ್ಳುವ ಸ್ಥಳ. ಇದರಲ್ಲಿ ಮಹಿಳೆಯರಿಗೆ ಅವಕಾಶ ನಿರಾಕರಿಸುವುದೆಂದರೆ ಸಂವಿಧಾನವು ನೀಡಿರುವ ಸಮಾನತೆ, ಗೌರವ ಮತ್ತು ಸಮಾನ ಅವಕಾಶಗಳ ಭರವಸೆಗಳನ್ನು ನಿರಾಕರಿಸುವುದಾಗಿದೆ. ಹಾಗೂ, ರಾಜಕೀಯ ಅಧಿಕಾರವು ಪುರುಷರಿಗೆ ಸೇರಿದ್ದು ಎಂಬ ಪುರುಷ ಪ್ರಧಾನ ಆಲೋಚನೆಯನ್ನು ಬಲಪಡಿಸುತ್ತಿದೆ.

ಮೊದಲ ಪಟ್ಟಿಯಲ್ಲಿದ್ದ ಗಾಯತ್ರಿ ಶಾಂತೇಗೌಡ ಅವರ ಹೆಸರನ್ನು ಅಂತಿಮ ಪಟ್ಟಿಯಲ್ಲಿ ಕೈಬಿಟ್ಟಿರುವುದು ಮತ್ತಷ್ಟು ಕಳವಳಕಾರಿಯಾಗಿದೆ. ರಾಜಕೀಯ ಸಮೀಕರಣಗಳಿಗಾಗಿ ಮಹಿಳೆಯರ ಪ್ರತಿನಿಧಿತ್ವವನ್ನು ಸುಲಭವಾಗಿ ಬಲಿಕೊಡಬಹುದು ಎನ್ನುವ ಈ ಚಿಂತನೆಯು, ಮಹಿಳಾ ನಾಯಕತ್ವವನ್ನು ಪ್ರಜಾಪ್ರಭುತ್ವದ ಅವಶ್ಯಕತೆಯಾಗಿ ನೋಡದೆ, ರಾಜಕೀಯದಲ್ಲಿ ಬೇಕಾದಂತೆ ಬಳಸಿ ಬಿಸಾಡಬಹುದಾದ ಒಂದು ಯಕಶ್ಚಿತ್ ವಸ್ತುವಿನಂತೆ ನೋಡಲಾಗುತ್ತದೆ ಎನ್ನುವುದನ್ನು ಸಾಬೀತು ಪಡಿಸುತ್ತದೆ.

ಕರ್ನಾಟಕದಲ್ಲಿ ಸಂಪೂರ್ಣ ಪುರುಷರ ಸಚಿವ ಸಂಪುಟವನ್ನು ರಚಿಸಿರುವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವು ರಾಷ್ಟ್ರ ಮಟ್ಟದಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಹೋರಾಡುವ ನೈತಿಕತೆಯನ್ನು ಕಳೆದುಕೊಂಡಿದೆ. ಅದು ವಿರೋಧಾಭಾಸವಾಗುತ್ತದೆ. ಲಿಂಗ ಸಮಾನತೆಯನ್ನು ಚುನಾವಣೆಯ ಘೋಷಣೆಗೆ ಅಥವಾ ಪ್ರಣಾಳಿಕೆಯ ಭರವಸೆಗೆ ಸೀಮಿತಗೊಳಿಸಲು ಇನ್ನು ಸಾಧ್ಯವಿಲ್ಲ. ರಾಜಕೀಯ ಅಧಿಕಾರ ಹಂಚಿಕೆಯಲ್ಲಿ ಅದು ಪ್ರತಿಫಲಿಸಬೇಕು.

ಕೆಲವೇ ವರ್ಷಗಳ ಹಿಂದೆ ನೀವು **"ನಾ ನಾಯಕಿ"** ಎಂಬ ಹೆಸರಿನಲ್ಲಿ ಪಕ್ಷ ಸಂಘಟನೆಯ ಕಾರ್ಯಕ್ರಮವನ್ನು ಹಾಕಿಕೊಂಡು ರಾಜ್ಯಾದ್ಯಂತ ಸಭೆಗಳನ್ನು ನಡೆಸಿದ್ದಿರಿ. ಲೇಖಕರು, ಬುದ್ಧಿಜೀವಿಗಳು, ಮಹಿಳಾ ಚುನಾಯಿತ ಪ್ರತಿನಿಧಿಗಳು, ಮಹಿಳಾ ಸಂಘಟನೆಗಳು ಮತ್ತು ನಾಗರಿಕ ಸಂಸ್ಥೆಗಳೊಂದಿಗೆ ಸಂವಾದವನ್ನು ನಡೆಸಿದ್ದಿರಿ. ಆದರೆ ಇಂದು, "ನಾ ನಾಯಕಿ" ಹೋಗಿ **"ನಾ ನಾಯಕ"** ಆಗಿ ಬಿಟ್ಟಿದೆ.

ಈ ಗಂಭೀರ ಲೋಪವನ್ನು ಕೂಡಲೆ ಸರಿಪಡಿಸುವಂತೆ ನಾವು ನಿಮ್ಮನ್ನು ಆಗ್ರಹಿಸುತ್ತೇವೆ. ಕೇವಲ ಸಾಂಕೇತಿಕ ಸ್ಥಾನವಲ್ಲ. ಸೂಕ್ತವಾದ, ಸಮರ್ಥವಾದ ಪ್ರಾತಿನಿಧ್ಯವನ್ನು ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ನೀಡಬೇಕು. ಪ್ರಜಾಸತ್ತಾತ್ಮಕ ಆಡಳಿತಕ್ಕೆ ಹಾಗೂ ಎಲ್ಲರನ್ನೂ ಒಳಗೊಳ್ಳುವಂತಹ ರಾಜಕೀಯಕ್ಕೆ ಬದ್ಧರಾದ, ಪ್ರಬುದ್ಧ ಮಹಿಳೆಯರು ನಿಮ್ಮ ಪಕ್ಷದಲ್ಲಿ ಸಾಕಷ್ಟಿದ್ದಾರೆ ಎಂದು ನಾವು ತಿಳಿದಿದ್ದೇವೆ. ಅಂತಹವರನ್ನು ಆಯ್ಕೆಮಾಡಿ ಈ ಐತಿಹಾಸಿಕ ಅಸಮತೋಲನವನ್ನು ಸರಿಪಡಿಸಬೇಕು. ಸಂವಿಧಾನಾತ್ಮಕ ಮೌಲ್ಯಗಳನ್ನು ಉಳಿಸುವುದಾಗಿ ಹೇಳಿಕೊಳ್ಳುವ ಸರ್ಕಾರವು ಮಹಿಳೆಯರೇ ಇಲ್ಲದ ಸಚಿವ ಸಂಪುಟವನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ನಿಮ್ಮ ಸಂಪುಟದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಹಿಳೆಯರಿಗೆ ಅವಕಾಶ ನೀಡದೆ ಇದ್ದಲ್ಲಿ **'ಈ ರಾಜ್ಯದಲ್ಲಿ ಮಹಿಳೆಯರಿಗೆ ಸ್ಥಾನವಿಲ್ಲ'** ಎಂಬ ಸಂದೇಶವನ್ನು ರವಾನಿಸಿದಂತೆ ಆಗುತ್ತದೆ. ಮಹಿಳೆಯರ ಸಮಾನ ರಾಜಕೀಯ ಪಾಲ್ಗೊಳ್ಳುವಿಕೆಯು ಯಾವುದೇ ಉಪಕಾರವಲ್ಲ. ಅದು ಸರ್ಕಾರಗಳ ಸಂವಿಧಾನಾತ್ಮಕ ಬಾಧ್ಯತೆ. ಇದು ಸಾಧ್ಯವಾಗುವವರೆಗೂ ನಾವು ಸರ್ಕಾರಗಳನ್ನು ಹೊಣೆಗಾರರನ್ನಾಗಿ ಮಾಡುತ್ತಲೇ ಇರುತ್ತೇವೆ.

ಕರ್ನಾಟಕದ ಮಹಿಳೆಯರಿಗೆ ಹಾಗೂ ರಾಜಕೀಯ ಒಳಗೊಳ್ಳುವಿಕೆಗೆ ನೀವೆಷ್ಟು ಬದ್ಧರಾಗಿದ್ದೀರಿ ಎಂಬುದನ್ನು ನೋಡಲು ನಾವು ಕಾಯುತ್ತಿದ್ದೇವೆ. ನಾವು ಗಮನಿಸುತ್ತಲೇ ಇರುತ್ತೇವೆ.

**ಸಹಿ ಮಾಡುತ್ತಿರುವವರು,**

**'ನಾವೆದ್ದು ನಿಲ್ಲದಿದ್ದರೆ, ಕರ್ನಾಟಕ'**ದ ಭಾಗವಾಗಿ

1. ಗಮನ
2. ವಿಮೋಚನಾ
3. ಸಬಲಾ, ವಿಜಯಪುರ
4. ಪ್ರೇರಣಾ ವಿಕಾಸ ವೇದಿಕೆ, ಹಾಸನ
5. ಟ್ರಾನ್ಸ್ ಫೆಮಿಸಿಸ್ಟ್ ಕಲೆಕ್ಟಿವ್
6. ಕರ್ನಾಟಕ ಇಂಟರ್ ಸೆಕ್ಸ್ ಅಸೋಸಿಯೇಷನ್
7. ಕರ್ನಾಟಕ ಸ್ಟೇಟ್ ಜೆಂಡರ್ ಅಂಡ್ ಸೆಕ್ಷುಆಲಿಟಿ ಮೈನಾರಿಟಿ ಕೊಅಲಿಷನ್ ಫಾರ್ ಗವರ್ನೆನ್ಸ್
8. ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ
9. ದುಡಿಯುವ ಜನರ ವೇದಿಕೆ ಕರ್ನಾಟಕ
10. ಪ್ರಕೃತಿ ಕಲಾ ಸೇವಾ ಸಮಿತಿ
11. ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್ (KSWU)
12. ಸಮೃದ್ಧಿ ಫೌಂಡೇಶನ್
13. ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿ (MGSP)
14. CSGMR - ಲೈಂಗಿಕ ಕಾರ್ಮಿಕರು, ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಒಕ್ಕೂಟ
15. ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟ
16. ಜನ ಸೇವಾ ಸಮಿತಿ (JSS)
17. ಪ್ರತಿಬಿಂಬ ಸೇವಾ ಸಂಸ್ಥೆ ರಾಮನಗರ ಜಿಲ್ಲೆ
18. ಸ್ವತಂತ್ರ ಸಂಸ್ಥೆ
19. ಮಾನಸ ಸ್ವಾಯತ್ತ ಮಹಿಳಾ ಸಂಘಟನೆ
20. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ
21. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (GATWU)
22. ಮಹಿಳಾ ಮುನ್ನಡೆ
23. ಚಿಲುಮೆ ಮಹಿಳಾ ಪತ್ರಿಕೆ
24. ಬೇರು ಸಂಸ್ಥೆ
25. ಯುನೈಟೆಡ್ ಯೂನಿಯನ್ ಆಫ್ ಗಾರ್ಮೆಂಟ್ ವರ್ಕರ್ಸ್